ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತ ಸದಸ್ಯರ ಹೆಸರು:	ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	1981 (2400)
ಉತ್ತರಿಸಬೇಕಾದ ದಿನಾಂಕ:	29-03-2021
ಉತ್ತರಿಸುವ ಸಚಿವರು:	ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ವೈದ್ಯಕೀಯ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಬರೆದ ಉತ್ತರ ಪತ್ರಿಕೆಗಳನ್ನು ಯಾವ ರೀತಿಯಲ್ಲಿ ಮೌಲ್ಯಮಾಪನ ಮಾಡಲಾಗುತ್ತಿದೆ;	ವೈದ್ಯಕೀಯ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಬರೆದ ಉತ್ತರಪತ್ರಿಕೆಗಳ ಮೌಲ್ಯಮಾಪನವನ್ನು ಆನ್ ಸ್ಕ್ರೀನ್ (Onscreen) ಗಣಕೀಕೃತ ಪದ್ಧತಿಯನ್ನು ಅನುಸರಿಸಿ ಮಾಡಲಾಗುತ್ತಿದೆ.
ಆ)	ಸದರಿ ವ್ಯವಸ್ಥೆಯು ಹಿಂದಿನ ವ್ಯವಸ್ಥೆಗಿಂತ ಯಾವ ರೀತಿಯ ಗುಣಮಟ್ಟದಲ್ಲಿ ಸುಧಾರಣೆ ಕಂಡಿದೆ; ಅಥವಾ ಕಳಪೆಯಾಗಿದೆ; ಇದನ್ನು ಸುಧಾರಿಸಲು ತೆಗೆದುಕೊಂಡ ಕ್ರಮಗಳೇನು;	ಹಿಂದಿನ ವ್ಯವಸ್ಥೆಯಲ್ಲಿ ಮೌಲ್ಯಮಾಪನವನ್ನು ಮ್ಯಾನುಯಲ್ (Manual) ಪದ್ಧತಿಯಲ್ಲಿ ನಡೆಸಲಾಗುತ್ತಿತ್ತು. ಸದ್ಯದ ಮೌಲ್ಯಮಾಪನ ವ್ಯವಸ್ಥೆಯು ಬಾರ್‌ಕೋಡ್‌ನಿಂದ ಕೂಡಿದ್ದು ಗಣಕೀಕೃತ (Digital Valuation)ವಾಗಿರುತ್ತದೆ. ಸದರಿ ಮೌಲ್ಯಮಾಪನ ವ್ಯವಸ್ಥೆಯಲ್ಲಿ ಮೌಲ್ಯಮಾಪಕರ ಗುರುತಿಸುವಿಕೆಯನ್ನು ಸಹ ಗಣಕೀಕೃತಗೊಳಿಸಲಾಗಿದೆ.
ಇ)	ಸಾಮಾನ್ಯವಾಗಿ ಒಂದು ಉತ್ತರ ಪತ್ರಿಕೆ ಮೌಲ್ಯಮಾಪನಕ್ಕೆ ಉತ್ತಮವಾದ ಪರೀಕ್ಷಕರು ಎಷ್ಟು ಸಮಯ ತೆಗೆದುಕೊಳ್ಳುತ್ತಿದ್ದಾರೆ; ಇದನ್ನು ವಿಶ್ವವಿದ್ಯಾನಿಲಯವು ಯಾವ ರೀತಿ ಧೃಡೀಕರಿಸಿಕೊಳ್ಳುತ್ತಿದೆ;	ಸಾಮಾನ್ಯವಾಗಿ ಉತ್ತಮ ಗುಣಮಟ್ಟದ ಮೌಲ್ಯಮಾಪಕರು ವಿದ್ಯಾರ್ಥಿಗಳು ಉತ್ತರಿಸಿದ ಉತ್ತರಗಳ ಆಧಾರದ ಮೇಲೆ ಸರಾಸರಿ 15 ರಿಂದ 20 ನಿಮಿಷಗಳನ್ನು ಮೌಲ್ಯಮಾಪನಕ್ಕೆ ತೆಗೆದುಕೊಳ್ಳುತ್ತಿದ್ದಾರೆ.
ಈ)	ವಿಶ್ವವಿದ್ಯಾಲಯವು ಗುರುತಿಸಿದ ಮೌಲ್ಯಮಾಪಕರೇ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುತ್ತಿರುವ ಬಗ್ಗೆ ಮಾಹಿತಿ ಹೊಂದಲು ಯಾವ ವ್ಯವಸ್ಥೆ ಹೊಂದಿದೆ;	ವಿಶ್ವವಿದ್ಯಾಲಯವು ಅರ್ಹ ಮೌಲ್ಯಮಾಪಕರ ಪಟ್ಟಿಯನ್ನು ತಯಾರಿಸಿ, ಪ್ರತಿಯೊಬ್ಬ ಮೌಲ್ಯಮಾಪಕರಿಗೆ ಯೂಸರ್ ಐಡಿ (User ID) ಮತ್ತು (Password)ಗಳನ್ನು ನೀಡಲಾಗಿರುತ್ತದೆ. ತದನಂತರ ಪ್ರತಿ ಬಾರಿ ಮೌಲ್ಯಮಾಪನಕ್ಕೆ ಲಾಗಿನ್ (Login) ಆಗಲು ಓಟಿಪಿ (OTP)ಯನ್ನು ಮೌಲ್ಯಮಾಪಕರ ರಿಜಿಸ್ಟರ್ಡ್ (Registered) ಮೊಬೈಲ್ ನಂಬರ್‌ಗೆ ಕಳುಹಿಸಿ, ಅದನ್ನು ಪರಿಶೀಲಿಸಿದ ನಂತರ ಮೌಲ್ಯಮಾಪನವನ್ನು ಆರಂಭಿಸಲಾಗುತ್ತಿದೆ.

ಉ)	3 ರಿಂದ 5 ನಿಮಿಷಗಳಲ್ಲಿ ಉತ್ತರ ಪತ್ರಿಕೆಗಳ ಮೌಲ್ಯಮಾಪನವಾಗುತ್ತಿದೆ ಎಂಬ ವಿದ್ಯಾರ್ಥಿಗಳ ಅಳಲನ್ನು ವಿಶ್ವವಿದ್ಯಾನಿಲಯ ಯಾವ ರೀತಿ ದೂರ ಮಾಡುತ್ತದೆ?	ವಿಶ್ವವಿದ್ಯಾಲಯವು ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಕನಿಷ್ಠ 05 ನಿಮಿಷ ಹಾಗೂ ಗರಿಷ್ಠ ಅವಧಿಗೆ ಮಿತಿಯನ್ನು ನಿಗಧಿಪಡಿಸಲಾಗಿರುವುದಿಲ್ಲ. ವಿದ್ಯಾರ್ಥಿಯು ಬರೆದ ಉತ್ತರಗಳ ಆಧಾರದ ಮೇಲೆ ಮೌಲ್ಯಮಾಪನದ ಸಮಯವನ್ನು ಹೆಚ್ಚಿಸಲಾಗುತ್ತದೆ. ಯಾವುದೇ ಮೌಲ್ಯಮಾಪಕರು ಮೌಲ್ಯಮಾಪನದಲ್ಲಿ ಲೋಪವೆಸಗಿದ್ದು ವಿಶ್ವವಿದ್ಯಾಲಯದ ಗಮನಕ್ಕೆ ಬಂದಾಗ 'ಎಕ್ಸಾಮಿನೇಷನ್ ಲ್ಯಾಪ್ಸಸ್ ಎನ್ಕ್ವೈರಿ (Examination Lapses Enquiry) ಕಮಿಟಿಯ ಮುಂದೆ ಹಾಜರುಪಡಿಸಿ ಮೌಲ್ಯಮಾಪಕರು ಎಸಗಿದ ಲೋಪದ ಆಧಾರದ ಮೇಲೆ ದಂಡ ಹಾಗೂ ಮೌಲ್ಯಮಾಪನ ನಿರ್ಬಂಧದಂತಹ ಶಿಕ್ಷೆಯನ್ನು ನೀಡಲಾಗುತ್ತದೆ.

ಸಂಖ್ಯೆ: ಎಂಇಡಿ 211 ಎಂಪಿಎಸ್ 2021

(ಡಾ.ಕೆ.ಸುಧಾಕರ್)
ವೈದ್ಯಕೀಯ ಶಿಕ್ಷಣ ಹಾಗೂ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಇಲಾಖಾ ಸಚಿವರು